

ಹರೀಶ್ ಹಂದೆ

# ಸುಸ್ಥಿರ ಶಕ್ತಿಯಿಂದ ಬಡತನ ನಿವಾರಣೆ

ಸೌರ ಶಕ್ತಿಯಿಂದ ಬಡತನ ನಿವಾರಣೆ ಸಾಧ್ಯ ಎಂಬುದನ್ನು ಭಾರತದಲ್ಲಿ ಮೊದಲಿಗೆ ತೋರಿಸಿಕೊಟ್ಟವರು ಸೌರಶಕ್ತಿಯ ಹರಿಕಾರ ಎಂದೇ ಖ್ಯಾತಿವೆತ್ತ ಮ್ಯಾಗ್ಸೇಸೆ ಪ್ರಶಸ್ತಿ ಪುರಸ್ಕೃತರಾದ ಡಾ.ಹರೀಶ್ ಹಂದೆ. ಸಾಮಾಜಿಕ ಉದ್ಯಮಿ ಎಂದೇ ಹೆಸರುವಾಸಿಯಾದ ಹರೀಶ್ ಹಂದೆಯವರು ಸೆಲ್ಕೋ ಸಂಸ್ಥೆಯನ್ನು ಸ್ಥಾಪಿಸಿ ಆ ಮೂಲಕ ವಿದ್ಯುತ್ ಸಂಪರ್ಕ ಕಲ್ಪಿಸಲೂ ಸಾಧ್ಯವಿಲ್ಲದಂಥ ಬಡವರ ಮನೆಗಳಿಗೆ ಸೌರ ದೀಪಗಳನ್ನು ಅಳವಡಿಸಿ ಅವರಿಗೆಲ್ಲ ಬೆಳಕು ತೋರಿಸಿದವರು. ಈ ಕಾರಣಕ್ಕಾಗಿ ಸೆಲ್ಕೋ ಸಂಸ್ಥೆ ಗ್ರೀನ್ ಆಸ್ಕರ್ ಪ್ರಶಸ್ತಿ, ಜಾಯೇದ್ ಅಂತಾರಾಷ್ಟ್ರೀಯ ಪ್ರಶಸ್ತಿ ಮತ್ತು ಸ್ಕೋಲ್ ಸಾಮಾಜಿಕ ಉದ್ಯಮಶೀಲತಾ ಪ್ರಶಸ್ತಿಗಳನ್ನು ಪಡೆದುಕೊಂಡಿದೆ.

ಹುಬ್ಬಳ್ಳಿ, ಧಾರವಾಡಗಳ ಸುತ್ತಮುತ್ತಲಿನ ಹಳ್ಳಿಗಳು, ನಗರಗಳ ಕೊಳಗೇರಿ ಪ್ರದೇಶಗಳು, ಸಮಾಜದ ತೀರ ಕಟ್ಟಕಡೆಯ ವ್ಯಕ್ತಿ ಎಂದು ಕರೆಯಿಸಿಕೊಳ್ಳುವವರಿಗೂ ಹೋಗಿ ಅವರ ಜೀವನ ಮಟ್ಟ ಸುಧಾರಿಸಲು ಕಾರಣವಾಗಿದ್ದು ಈ ಸೌರಶಕ್ತಿ.

ಇದೆಲ್ಲ ಸಾಧ್ಯವಾಗಿದ್ದಾದರೂ ಹೇಗೆ?

ಹೀಗೆ ಬೆಳಕಿಲ್ಲದವರಿಗೆ ಬೆಳಕು ಹಂಚುವ ಕಾಯಕದಲ್ಲಿ ತೊಡಗಿರುವ ಸೌರ ವಿಜ್ಞಾನಿ ಡಾ. ಹರೀಶ್ ಹಂದೆಯವರಿಗೆ ಪ್ರೇರಣೆ ಸಿಕ್ಕಿದ್ದೇ ಬಡವರ ಮನೆಯಲ್ಲಿ ಸೋಲಾರ್ ದೀಪ ನೋಡಿ.

"ನಾನು 1991 ರಲ್ಲಿ ಯು.ಎಸ್.ಎ ನಲ್ಲಿ ಪಿ.ಹೆಚ್.ಡಿ ಮಾಡುವ ಸಮಯದಲ್ಲಿ ಡೊಮಿನಿಕನ್ ರಿಪಬ್ಲಿಕ್‌ಗೆ ಹೋಗಲು ಒಂದು ಅವಕಾಶ ಸಿಕ್ಕಿತ್ತು. ಅಲ್ಲಿ ತುಂಬ ಬಡವರು ಸಣ್ಣ ಸಣ್ಣ ಸೋಲಾರ್ ಲೈಟ್ ಹಾಕಿ ಓದುತ್ತಿದ್ದರು ಮತ್ತು ಕೆಲಸ ಮಾಡುತ್ತಿದ್ದರು. ಅದನ್ನು ನೋಡಿದಾಗ ನನಿಗನಿಸಿದ್ದೇನೆಂದರೆ ಅರೆ, ಇದನ್ಯಾಕೆ ನಮ್ಮದೇಶದಲ್ಲಿ ತರಬಾರದು ಎಂದು. ನಮ್ಮ ದೇಶದಲ್ಲಿ ಕೋಟ್ಯಂತರ ಜನರಿಗೆ ಇನ್ನೂ ಬೆಳಕಿಲ್ಲ. ಈ ಥರ ಬೆಳಕು ಕೊಟ್ಟು ನಮ್ಮ ದೇಶದ ಬಡವರನ್ನು ಬಡತನದಿಂದ ಹೊರಗೆ ತರಲಿಕ್ಕೆ ಇದೊಂದು ಅವಕಾಶ ಎಂದನಿಸಿತು. ಡೊಮಿನಿಕನ್ ರೆಪಬ್ಲಿಕ್‌ನಲ್ಲಿ ಕಳೆದ ಆ ಸ್ವಲ್ಪ ಸಮಯ ನನಗೆ ಬದುಕು ಬದಲಿಸಿದ ಅನುಭವವಾಯಿತು. ಹಾಗಾಗಿ ನಾನು ಇನ್ನುಮುಂದೆ ಸೋಲಾರ್ ಎಂದರೆ ಅದು ಬಡತನ ನಿವಾರಣೆಗಾಗಿ ಇರಬೇಕು ಎಂದುಕೊಂಡೆ ಎನ್ನುವ ಡಾ.ಹರೀಶ್ ಹಂದೆ, ಆ ದಿಸೆಯಲ್ಲಿಕೆಲಸ ಮಾಡಿದರು ಕೂಡ. ಬಡತನದ ರೇಖೆಗಿಂತ ಕಡಿಮೆ ಇರುವ ಸಾಕಷ್ಟು ಹಳ್ಳಿಗಳು, ಸಮುದಾಯಗಳಿಗೆ ಸೌರ ದೀಪಗಳನ್ನು ಕೊಟ್ಟ ಹೆಗ್ಗಳಿಕೆ ಇವರದ್ದು.

ನಂತರದ ದಿನಗಳಲ್ಲಿ ಅವರಿಟ್ಟ ಹೆಜ್ಜೆ ನಿಜಕ್ಕೂ ಕ್ರಾಂತಿಕಾರಿಯಾದದ್ದು. ಸೌರಶಕ್ತಿಯಿಂದ ಬಡವರ ಬದುಕಿನ ಮಟ್ಟ ಸುಧಾರಿಸಬಹುದು ಎಂಬ ಆಲೋಚನೆಯೇ ಭಿನ್ನವಾದದ್ದು. ಆದರೆ ಹರೀಶ್ ಹಂದೆ

ಇದಕ್ಕೂ ಮುಂಚೆ ವಿದ್ಯುತ್ ಚಾಲಿತ ಹೊಲಿಗೆ ಯಂತ್ರವನ್ನು ಕೊಂಡಿದ್ದರು. ಅದರಿಂದ ಇವರ ಆರೋಗ್ಯ ಸುಧಾರಿಸಿತು. ಆದರೆ ಅಲ್ಲೊಂದು ಸಮಸ್ಯೆ ಕಾಡತೊಡಗಿತು. ಅದೇಂದರೆ ಕರೆಂಟ್ ಸಮಸ್ಯೆ. ಆಗಾಗ ಕರೆಂಟ್ ಹೋಗುವ ಸಮಸ್ಯೆಯಿಂದಾಗಿ ಹೊಲಿಯುವುದಕ್ಕೆ ಅಡೆತಡೆಯಾಗುತ್ತಿತ್ತು. ಆಗಲೇ ಅವರಿಗೆ ವರದಾನವಾಗಿದ್ದು ಸೌರಚಾಲಿತ ಹೊಲಿಗೆ ಯಂತ್ರ.

ಈಗ ಈ ಹೊಲಿಗೆ ಯಂತ್ರವನ್ನು ಖರೀದಿಸಿ ಎರಡೂವರೆ ವರ್ಷಗಳಿಗೂ ಮಿಗಿಲಾಗಿವೆ. ಪೆಡಲ್ ತುಳಿಯುವ ಗೋಜಿಲ್ಲ. ಆರೋಗ್ಯ ತನ್ನಿಂದ ತಾನೇ ಸುಧಾರಿಸಿದೆ. ಎಲ್ಲಕ್ಕಿಂತ ಮುಖ್ಯವಾಗಿ ಮೊದಲು ವಾರಕ್ಕೆ 500-–1000 ರೂ. ಗಳಿಸುತ್ತಿದ್ದವರು ಇಂದು 3000-–4000ರೂಪಾಯಿ ಗಳಿಸುತ್ತಿದ್ದಾರೆ. 'ಸಾಲವನ್ನೆಲ್ಲ ಆಗಲೇ ತೀರಿಸಿಬಿಟ್ಟೆ ಮೇಡಮ್ನೋರೆ. ಅಲ್ಲದೆ ಆ ಕಾಲಕ್ಕೇ 20 ಸಾವಿರ ರೂಪಾಯಿ ಉಳಿಸಿದ್ದೆ ಕೂಡ' ಎಂದು ಹೆಮ್ಮೆಯಿಂದ ಹೇಳಿಕೊಳ್ಳುವ ಮಹಾದೇವಿ, ಇನ್ನೂ ನಾಲ್ಕು ಹೊಲಿಗೆ ಯಂತ್ರಗಳನ್ನು ಇಟ್ಟುಕೊಂಡು ಇನ್ನೂ ಇಬ್ಬರು ಮಹಿಳೆಯರಿಗೆ ಉದ್ಯೋಗವನ್ನೂ ನೀಡಿ ಸ್ವಯಂ ಉದ್ಯಮಿಯಾಗಿದ್ದಾರೆ.

ಈಗ ವಕ್ಕುಂದ ಊರಿನಲ್ಲಿ ಯಾವುದೇ ಹೊಲಿಗೆ ಕೆಲಸ ಆಗಬೇಕೆಂದರೆ ಥಟ್ಟನೆ ನೆನಪಾಗುವುದೇ ಮಹಾದೇವಿ. ಊರಿನ ಮದುವೆ ಮನೆಯಾಗಲಿ, ಮುಂಜಿಯಾಗಲಿ, ಹಬ್ಬ ಹರಿದಿನಗಳಾಗಲಿ, ಅಲ್ಲಿ ಮಹಾದೇವಿ ಹೊಲಿದ ಬಟ್ಟೆ ಇರಲೇಬೇಕು. ಅಷ್ಟರಮಟ್ಟಿಗೆ ಅವರು ಜನಪ್ರಿಯರು. ಇದೆಲ್ಲವೂ ಸಾಧ್ಯವಾಗಿದ್ದು ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಮತ್ತು ಸೆಲ್ಕೋ ಸಂಸ್ಥೆಯಿಂದ ಎಂದು ಸ್ಮರಿಸಿಕೊಳ್ಳುವ ಮಹಾದೇವಿಗೆ ತನ್ನ ಮಗಳು ಸ್ಫೂರ್ತಿಯನ್ನು ಚೆನ್ನಾಗಿ ಓದಿಸಿ ದೊಡ್ಡ ಆಫೀಸರ್ ಮಾಡಬೇಕೆಂಬ ಕನಸು.

ಇಂದು ವಕ್ಕುಂದ ಊರಿನಲ್ಲಿ ನಾಲ್ಕಾರು ಸೌರ ಚಾಲಿತ ಹೊಲಿಗೆಯಂತ್ರಗಳಿವೆ. ಅವರೆಲ್ಲರೂ ಆರ್ಥಿಕವಾಗಿ ಸ್ವಾವಲಂಬಿಗಳಾಗಿದ್ದಾರೆ ಎನ್ನುತ್ತಾರೆ ಮಹಾದೇವಿ. ಹೀಗೆ ಚಿತ್ರದುರ್ಗದ ಸುಜಾತಾ, ಸೀಮಾ ನಾಯ್ಕ

ಉದ್ದಿಮೆಗೂ ಸೌರ ಶಕ್ತಿ

